**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 1 ಫ್ರಾ.ಸಾ. : 3**

ಸಾಕ್ಷಿಯ ಹೆಸರು : ರಾಮಾ
ತಂದೆಯ ಹೆಸರು : ಬೀರಪ್ಪ ನಾಯ್ಕ
ವಯಸ್ಸು : 62 ವರ್ಷ
ಉದ್ಯೋಗ : ಹಿಂದೆ ಶಾಲೆಗಳಿಗೆ ಆಹಾರ ವಸ್ತುಗಳ ಸರಬರಾಜು ಮಾಡುತ್ತಿದ್ದೆ. ಈಗ ಏನೂ ಮಾಡುತ್ತಿಲ್ಲ .
ವಾಸ : ಬಾಡ , ಕುಮಟಾ

**ದಿನಾಂಕಃ 23-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನ್ಯಾಯಾಲಯದ ಕಟಕಟೆಯಲ್ಲಿರುವ ಆರೋಪಿಯ ಗುರುತು ನನಗೆ ಇದೆ . ನಾನು ಕುಮಟಾ ತಾಲೂಕಿನ ಎಲ್ಲಾ ಶಾಲೆಗಳಿಗೆ ಆಹಾರ ಹಾಗೂ ಹಾಲನ್ನು ಸರಬರಾಜು ಮಾಡುತ್ತಿದ್ದೆ. ನಾನು 2013 ಕ್ಕೆ 8-10 ವರ್ಷ ಹಿಂದಿನಿಂದ ನಾನು ಆ ರೀತಿ ಶಾಲೆಗಳಿಗೆ ಆಹಾರ ಮತ್ತು ಹಾಲು ಸರಬರಾಜು ಮಾಡುತ್ತಿದ್ದೆ . ಆ ತಾಲೂಕಿನಲ್ಲಿ 241 ಶಾಲೆಗಳಿಗೆ ನಾನು ಆಹಾರ ಮತ್ತು ಹಾಲು ಸರಬರಾಜು ಮಾಡುತ್ತಿದ್ದೆ . ನಾನು ಸರಬರಾಜು ಮಾಡುತ್ತಿದ್ದ ಆಹಾರ ಮತ್ತು ಹಾಲಿನ ಬಿಲ್ಲನ್ನು ಸರ್ಕಾರ ಸರ್ಕಾರಿ ಖಜಾನೆ ಮೂಲಕ ನನಗೆ ಪಾವತಿ ಮಾಡುತ್ತಿತ್ತು . ಆರೋಪಿ ಅಕ್ಷರ ದಾಸೋಹ ಕಚೇರಿಯಲ್ಲಿ ಕುಮಟಾದಲ್ಲಿ ಆಗ ಅಧಿಕಾರಿಯಾಗಿದ್ದರು . ಆರೋಪಿ ಅಲ್ಲಿ ನಿರ್ದೇಶಕರು ಆಗಿದ್ದರು . 2013 ರಲ್ಲಿ ಸರ್ಕಾರ ಹೊಸ ಆದೇಶ ಮಾಡಿ ಕೆಎಂಎಫ್ ಧಾರವಾಡದಿಂದ ಹಾಲನ್ನು ಶಾಲೆಗಳಿಗೆ ಸರಬರಾಜು ಮಾಡುವಂತೆ ಆದೇಶಿಸಿತು . ಅದನ್ನು ಸರಬರಾಜು ಮಾಡಲು ನನಗೆ ವಹಿಸಿದ್ದರು . ಹಾಲಿ ಸರಬರಾಜು ಮಾಡುತ್ತಿದ್ದವರಿಗೆ ಕೆಎಂಎಫ್ ಧಾರವಾಡದಿಂದ ಹಾಲನ್ನು ಸರಬರಾಜು ಮಾಡಲು ನಿರ್ದೇಶನ ನೀಡಿದರು . ನಾನು ಆ ಪ್ರಕಾರ ಕೆಎಂಎಫ್ ಧಾರವಾಡದಿಂದ ಹಾಲನ್ನು ನಾನು ಪಡೆದು ಶಾಲೆಗಳಿಗೆ ಸರಬರಾಜು ಮಾಡಿರುತ್ತೇನೆ. ಅಂದರೆ ನಾನು ವಿತರಕನಾಗಿ ನನ್ನ ಸಾರಿಗೆ ವ್ಯವಸ್ಥೆ ಮೂಲಕ ಅದನ್ನು ತಾಲೂಕಿನ ಶಾಲೆಗಳಿಗೆ ಸರಬರಾಜು ಮಾಡಿರುತ್ತೇನೆ . ಅದರ ಬಿಲ್ಲನ್ನು ನಾನು

ತಾಲೂಕು ಪಂಚಾಯತಿ ಕಚೇರಿಗೆ ಸಲ್ಲಿಸಿದೆ . ಆಗ ನ್ಯಾಯಾಲಯದಲ್ಲಿರುವ ಆರೋಪಿ ಆ ಬಿಲ್ಲನ್ನು ಪಾವತಿಸಲು ಆಗುವುದಿಲ್ಲ ಎಂದು ನನಗೆ ಹಾರಿಕೆ ಉತ್ತರ ನೀಡಿದರು . ಆರೋಪಿ ಕುಮಟಾದ ತಾಲೂಕು ಪಂಚಾಯತಿ ಕಚೇರಿಯಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಆಗ ಕಾರ್ಯ ನಿರ್ವಹಿಸುತ್ತಿದ್ದರು . ನಾನು ಸಲ್ಲಿಸಿದ್ದ ಬಿಲ್ಲು ಸುಮಾರು ರೂ. 40,000/- ಆಗಿತ್ತು . ಆರೋಪಿ ನಾನು ಹಾಲು ಸರಬರಾಜು ಮಾಡಿದ ಬಗ್ಗೆ ದೃಢೀಕರಣ ಪತ್ರ ನೀಡಿದ ಮೇಲೆ ಧಾರವಾಡದ ಕೆಎಂಎಫ್ ರವರು ನನಗೆ ಹಣ ಪಾವತಿ ಮಾಡುತ್ತಿದ್ದರು . ಆದರೆ ಆರೋಪಿ ದೃಢೀಕರಣ ನೀಡಲು ಒಪ್ಪಲಿಲ್ಲ. ಆರೋಪಿ ದೃಢೀಕರಣ ನೀಡಲು ನನ್ನ ಬಳಿ ರೂ. 5000/- ಲಂಚವನ್ನು ಕೊಡುವಂತೆ ಒತ್ತಾಯಿಸಿದರು . ನನ್ನ ಬಳಿ ಲಂಚದ ಹಣ ಕೊಡಲು ಹಣ ಇರಲಿಲ್ಲ. ನಾನು ಧಾರವಾಡದ ಕೆಎಂಎಫ್ ನಿಂದ ಹಣ ಬರಲಿ ನಂತರ ಆರೋಪಿ ಕೇಳಿರುವ ಹಣವನ್ನು ಆರೋಪಿಗೆ ಕೊಡುವುದಾಗಿ ಆರೋಪಿಗೆ ತಿಳಿಸಿದೆ . ಆರೋಪಿ ಹಾಗೆ ಆಗುವುದಿಲ್ಲ ಮೊದಲೇ ಹಣ ಕೊಡಬೇಕು ಎಂದು ಒತ್ತಾಯಿಸಿದ . ನನಗೆ ಹಣ ಕೊಡುವ ಮನಸ್ಸು ಇರಲಿಲ್ಲ. ನಾನು ಐದು ಸಾವಿರ ಕೊಡಲು ಆಗುವುದಿಲ್ಲ ಮೂರು ಸಾವಿರ ಕೊಡುತ್ತೇನೆಂದು ಚೌಕಶಿ ಮಾಡಿದೆ . ನನಗೆ ಹಣ ಕೊಡಲು ಮನಸ್ಸು ಇಲ್ಲದಿದ್ದ ಕಾರಣ ಕಾರವಾರದ ಲೋಕಾಯುಕ್ತ ಅಧಿಕಾರಿಗೆ ತಿಳಿಸಿದೆ . ಆಗ ಲೋಕಾಯುಕ್ತ ಅಧಿಕಾರಿಯವರು ಯೋಚನೆ ಮಾಡಿ ದೂರು ಕೊಡಿ ಮೊದಲು ದೂರು ಕೊಡಲು ಬರುತ್ತಿರಿ ನಂತರ ನೀವು ಅದರಲ್ಲಿ ಆಸಕ್ತಿ ತೋರಿಸುವುದಿಲ್ಲ ಎಂದು ಹೇಳಿದರು . ಆಗ ನಾನು ದೂರು ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ ಆ ರೀತಿ ಬರೆದುಕೊಡಿ ನಾನು ಹೋಗುತ್ತೇನೆ ಎಂದು ಹೇಳಿದೆ . ನಂತರ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು ಇಬ್ಬರು ಪಂಚರನ್ನು ಕರೆಸುವಂತೆ ಅಲ್ಲಿ ಇದ್ದ ಉಪ ನಿರೀಕ್ಷಕರಿಗೆ ಹೇಳಿದರು . ಅದಕ್ಕೆ ಪೂರ್ವದಲ್ಲಿ ನನ್ನ ದೂರನ್ನು ತೆಗೆದುಕೊಂಡರು . ಪೋನ್ ನಲ್ಲಿ ಆರೋಪಿ ಜೊತೆ ಮಾತನಾಡುವಂತೆ ನನಗೆ ಹೇಳಿದರು . ನಾನು ಆರೋಪಿ ಜೊತೆ ಮಾತನಾಡಿದೆ . ಆರಕ್ಷಕ ಉಪಾಧೀಕ್ಷಕರಿಗೆ ನಾನು ಪೋನನ್ನು ಕೊಟ್ಟೆ. ಅವರು ಪೋನ್ ನಲ್ಲಿ ವಾಯ್ಸು ರೆಕಾರ್ಡರ್ ನ್ನು ಚಾಲು ಮಾಡಿದರು . ನಂತರ ನನಗೆ ಮಾತನಾಡಲು ಸೂಚಿಸಿದರು . ನಾನು ಪೋನ್ ನಲ್ಲಿ ಆರೋಪಿ ಜೊತೆ ನನ್ನ ಕೆಲಸದ ಬಗ್ಗೆ ಮಾತನಾಡಿದಾಗ ಆರೋಪಿ ಹಣ ತಂದುಕೊಡಿ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದ . ನಾನು ಕೊಟ್ಟ ದೂರನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಸಹಿಯನ್ನು ಗುರುತಿಸುತ್ತೇನೆ . ಈಗ ನಾನು ಆ ದೂರನ್ನು ನೋಡಿರುತ್ತೇನೆ . ಅದರಲ್ಲಿ ನನ್ನ

ರುಜು ಇದೆ . ಆ ದೂರನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿದೆ . ಸಾಕ್ಷಿಯ ರುಜುವನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ದೂರನ್ನು ಕೊಟ್ಟ ಕೂಡಲೇ ಅವರು ಇಬ್ಬರು ಸರ್ಕಾರಿ ಪಂಚರನ್ನು ಕರೆಯಿಸಿದರು . ಅವರ ಹೆಸರು ದರ್ಶನ ಆಗಿರುತ್ತದೆ . ಇನ್ನೊಬ್ಬರ ಹೆಸರು ಏನು ಎಂದರೆ ಸಾಕ್ಷಿಯು ಮಾಂಜ್ರೇಕರ ಇರಬಹುದು ಎಂದು ನುಡಿದಿರುತ್ತಾರೆ . ನಂತರ ಪ್ರಯೋಗ ಪ್ರಾರಂಭಿಸಿದರು . ನನ್ನ ಬಳಿಯಿಂದ ರೂ. 3000/- ಹಣವನ್ನು ಹಾಜರುಪಡಿಸಿಕೊಂಡರು . ಅದರಲ್ಲಿ ರೂ. 2000/- ದ ಒಂದು ನೋಟು ಮತ್ತು ರೂ. 500/- ರ ಎರಡು ನೋಟು ಇತ್ತು . ಆ ನೋಟುಗಳಿಗೆ ಏನೋ ಪುಡಿ ಹಚ್ಚಿದರು . ಸೋಡಿಯಂ ಕಾರ್ಬೋನೇಟ್ ಪುಡಿ ಹಚ್ಚಿದ್ದರು . ನಂತರ ಭಟ್ಟಿ ಇಳಿಸಿದ ನೀರನ್ನು ಏನೋ ಹಾಕಿ ಪಂಚ ಸಾಕ್ಷಿರವರ ಕೈ ತೊಳೆಸಿದರು . ಆ ರೀತಿ ಪುಡಿ ಹಚ್ಚಿದ ಹಣ ಮುಟ್ಟಿದ ಮೇಲೆ ಕೈಯನ್ನು ದ್ರಾವಣದಲ್ಲಿ ಅದ್ದಿದರೆ ದ್ರಾವಣ ಕೆಂಪಾಗುತ್ತದೆ ಎಂದು ಹೇಳಿದರು . ಆರಕ್ಷಕ ಉಪಾಧೀಕ್ಷಕರು ಮತ್ತು ಪಂಚರು ನಾನು ಕೊಟ್ಟ ಹಣವನ್ನು ಎಣಿಸಿದರು . ಪುಡಿ ಹಚ್ಚಿದ ಮೇಲೆ ಆ ಹಣವನ್ನು ಪಂಚ ಸಾಕ್ಷಿ ಎಣಿಸಿದರು . ಆ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ . ಆ ಛಾಯಾಚಿತ್ರಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಪುಡಿ ಹಚ್ಚಿದ ಹಣವನ್ನು ಒಂದು ಲಕೋಟೆಯಲ್ಲಿ ಹಾಕಿದರು . ಆ ಹಣವನ್ನು ಪದೇ ಪದೇ ಮುಟ್ಟ ಬೇಡಿ ಎಂದು ಹೇಳಿದರು . ಅದನ್ನು ನನ್ನ ಅಂಗಿಯ ಎಡಜೇಬಿನಲ್ಲಿ ಆ ಹಣವನ್ನು ಆರಕ್ಷಕ ಉಪಾಧೀಕ್ಷಕರು ಅಥವಾ ಪಂಚ ಸಾಕ್ಷಿ ಇಟ್ಟಿರಬಹುದು. ಆರೋಪಿ ಬಳಿ ಹೋದಾಗ ಮಾತ್ರ ಆ ಹಣವನ್ನು ಮುಟ್ಟಬೇಕು ಅಲ್ಲಿಯವರೆಗೆ ಮುಟ್ಟಬಾರದು ಎಂದು ಆರಕ್ಷಕ ಉಪಾಧೀಕ್ಷಕರು ನನಗೆ ಹೇಳಿದರು . ನಂತರ ನಮ್ಮ ಎಲ್ಲರ ಕೈಗಳನ್ನು ನೀರಿನಲ್ಲಿ ಕೊನೆಯಲ್ಲಿ ತೊಳೆಸಿದರು . ಪಂಚರ ಮತ್ತು ನನ್ನ ಕೈಗಳನ್ನು ಪ್ರತ್ಯೇಕವಾಗಿ ತೊಳೆಸಿದರು . ಆಗ ಬಣ್ಣ ಇಲ್ಲದ ನೀರಿನಂತಿದ್ದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ನನ್ನ ಕೈ ತೊಳೆಸಿದಾಗ ಸಹ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ತುಂಬಿದರು . ಅದಕ್ಕೆ ಎ ಎಂಬ ಅಕ್ಷರದ ಮೊಹರು ಹಾಕಿ ಸೀಲು ಮಾಡಿ ಜಪ್ತು ಮಾಡಿದರು . ಆ ರೀತಿ ಅಂದಾಜು ಎರಡು ಬಾಟಲು ಜಪ್ತು ಮಾಡಿದರು ಆದರೆ ನನಗೆ ಸರಿಯಾಗಿ ನೆನಪಿಲ್ಲ. ಕಾರಣ ನನಗೆ ಈಗ ಆರೋಗ್ಯ ಸರಿ ಇಲ್ಲ. ನನ್ನ ಮೆದುಳಿನಿಂದ ನನ್ನ ಕಾಲಿನ ಹೆಬ್ಬೆರಳಿಗೆ ಹೋಗಿರುವ ನರ ಸಮಸ್ಯೆ ಆಗಿರುವುದರಿಂದ ನನಗೆ ಪೂರ್ತಿಯಾಗಿ ಗುಣಪಡಿಸಲು ಆಗುವುದಿಲ್ಲ ಎಂದು ವೈದ್ಯರು ಹೇಳಿದ್ದಾರೆ . ಈಗ ತೋರಿಸಿದ

ಛಾಯಾಚಿತ್ರದಲ್ಲಿ ನಾನು ಇದ್ದೇನೆ . ಅದರಲ್ಲಿ ನನ್ನ ಕಿಸೆಯಲ್ಲಿ ಲೋಕಾಯುಕ್ತ ಕಚೇರಿಯ ಸಿಬ್ಬಂದಿ ಯಾರೋ ಆ ನೋಟುಗಳನ್ನು ಇಡುತ್ತಿದ್ದಾರೆ . ಸಾಕ್ಷಿ ನಿ.ಪಿ. 13 ಛಾಯಾಚಿತ್ರವನ್ನು ಗುರುತಿಸಿದ್ದಾರೆ . ಈಗ ನೋಡಿದ ಛಾಯಾಚಿತ್ರಗಳನ್ನು ಸಹ ಲೋಕಾಯುಕ್ತ ಕಚೇರಿಯಲ್ಲಿ ಆಗ ತೆಗೆದಿದ್ದಾರೆ. ಅವುಗಳನ್ನು ಈಗಾಗಲೇ ನಿ.ಪಿ. 12, 14 ರಿಂದ 18 ಎಂದು ಗುರುತಿಸಲಾಗಿದೆ . ಟ್ರ್ಯಾಪ್ ಸಮಯದಲ್ಲಿ ಸಹ ಛಾಯಾಚಿತ್ರ ತೆಗೆದಿದ್ದಾರೆ ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ . ಈಗ ನೋಡಿದ ಮು.ಮಾ. 3 ಮತ್ತು 5 ಬಾಟಲಿಯಲ್ಲಿ ದ್ರಾವಣವನ್ನು ಆಗ ಜಪ್ತು ಮಾಡಿದ್ದಾರೆ ಎಂದು ಸಾಕ್ಷಿ ಗುರುತಿಸಿರುತ್ತಾರೆ . ಈಗ ತೋರಿಸಿದ ಮು.ಮಾ. 2 ಮತ್ತು 4 ನನಗೆ ನೆನಪಿಲ್ಲ. ಆ ಸಮಯದಲ್ಲ ಬರವಣಿಗೆ ಮಾಡಿದರು . ಅದಕ್ಕೆ ನಾನು ರುಜು ಮಾಡಿರುತ್ತೇನೆ. ಏನು ಬರವಣಿಗೆ ಮಾಡಿದರು ಎಂದು ನೆನಪಿಲ್ಲ. ಆ ಸಮಯದಲ್ಲಿ ಅದನ್ನು ನನಗೆ ಓದಿ ಹೇಳಿದ್ದರು . ಆಗ ನನಗೆ ಅದರಲ್ಲಿದ್ದ ಬರೆದ ವಿಚಾರ ಎಲ್ಲಾ ಗೊತ್ತಿತ್ತು . ಈಗ ನಾನು ಆ ಬರವಣಿಗೆಯನ್ನು ನೋಡಿರುತ್ತೇನೆ . ಸಾಕ್ಷಿಯು ಪ್ರಾಯೋಗಿಕ ಪಂಚನಾಮೆ ಗುರುತಿಸಿರುತ್ತಾರೆ . ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದೆ . ಅದರಲ್ಲಿ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು.

2. ನಂತರ ಲೋಕಾಯುಕ್ತ ಪೊಲೀಸ್ ರ ಇಲಾಖಾ ವಾಹನದಲ್ಲಿ ನನ್ನನ್ನು ಕುಳ್ಳರಿಸಿಕೊಂಡರು . ನಾವು ಆಗ ಸುಮಾರು 8 ಜನ ಇದ್ದೆವು . ಅವರ ಪೈಕಿ ಇಬ್ಬರು ಪಂಚರು ಇದ್ದರು . ಆರಕ್ಷಕ ಉಪಾಧೀಕ್ಷಕರು , ಆರಕ್ಷಕ ಉಪ ನಿರೀಕ್ಷಕರು , ಆರಕ್ಷಕ ಪೇದೆ ಪಟಗಾರ ಎನ್ನುವವರು ಇದ್ದರು . ವಾಹನದಲ್ಲಿ ಹೋಗುವುದಕ್ಕೆ ಮೊದಲು ಪದೇ ಪದೇ ಹಣವನ್ನು ಮುಟ್ಟಬೇಡಿ ಎಂದು ನನಗೆ ಸೂಚನೆ ಕೊಟ್ಟರು . ನನಗೆ ವಾಯ್ಸ್ ರೆಕಾರ್ಡರ್ ಕೊಟ್ಟರು . ಆರೋಪಿ ಬಳಿ ಹೋಗುವಾಗ ಮಾತ್ರ ಅದನ್ನು ಚಾಲು ಮಾಡಿ ಇಟ್ಟುಕೊಳ್ಳಬೇಕು ಎಂದು ಹೇಳಿದರು . ಆರೋಪಿ ಬಳಿ ನಾನು ಮಾತನಾಡಿದಾಗ ಆರೋಪಿ ಕೇಳಿದರೆ ಮಾತ್ರ ನನಗೆ ವಹಿಸಿದ್ದ ಹಣವನ್ನು ಆರೋಪಿಗೆ ಕೊಡಬೇಕು ಎಂದು ಹೇಳಿದರು . ಕುಮಟಾಗೆ ಹೋದಾಗ ಗಿಬ್ಸ್ ಹೈಸ್ಕೂಲ್ ಬಳಿ ವಾಹನ ನಿಲ್ಲಿಸಿದರು . ನನ್ನನ್ನು ಅಲ್ಲಿಂದ ಆರೋಪಿ ಕಚೇರಿಗೆ ಹೋಗಲು ಹೇಳಿದರು ನನ್ನ ಜೊತೆ ಒಬ್ಬ ಸಾಕ್ಷಿಯನ್ನು ಕಳುಹಿಸಿದರು . ಅಲ್ಲಿಗೆ ಹೋದಾಗ ಸಂಜೆ 6.15 ಗಂಟೆಯಾಗಿತ್ತು . ನನ್ನ ಜೊತೆ ಬಂದ ಒಬ್ಬ ಪಂಚ ನನ್ನ ಹಿಂದೆ ಹಿಂಬಾಲಿಸಿ ಬಂದು ನಿಂತಿದ್ದರು .

ದೂರ ಹೊರಗಡೆ ನಿಂತುಕೊಂಡು ನಾನು ಆರೋಪಿ ಜೊತೆ ಮಾತನಾಡುವುದನ್ನು ಕೇಳುತ್ತಿದ್ದರು. ನಾನು ಆರೋಪಿ ಬಳಿ ಹೋದಾಗ ಆರೋಪಿ ಹಣವನ್ನು ಕೊಡುವುದು ಬೇಡ ಹೊರಗೆ ಹೋಗಿ ಎಂದು ಹೇಳಿದ . ನಂತರ ಆರೋಪಿ ಅವರ ಕಚೇರಿಯ ಹೊರಗೆ ಕಚೇರಿ ಆವರಣದಲ್ಲಿ ಇದ್ದ ಬೈಕ್ ಸ್ಟ್ಯಾಂಡ್ ಬಳಿ ಬಂದ . ಅಲ್ಲಿ ಆರೋಪಿ ಹಣ ಕೊಡುವಂತೆ ಕೇಳಿದ . ಆರೋಪಿ ಕೇಳಿದಂತೆ ನಾನು ರೂ. 3000/- ಹಣವನ್ನು ಕೊಟ್ಟೆ . ಅದು ಲಂಚದ ಹಣ ಆಗಿತ್ತು. ಅದು ಪುಡಿ ಹಾಕಿಕೊಟ್ಟಿದ್ದ ಹಣ ಆಗಿತ್ತು . ಆರೋಪಿ ಆ ಹಣವನ್ನು ತೆಗೆದುಕೊಂಡು ಎಣಿಸಿಕೊಂಡ . ಆರೋಪಿ ಆ ಹಣವನ್ನು ಎಲ್ಲಿ ಇಟ್ಟುಕೊಂಡ ಎಂದು ನನಗೆ ಮರೆತು ಹೋಗಿದೆ. ನಂತರ ನಾನು ಆರಕ್ಷಕ ಉಪಾಧೀಕ್ಷಕರು ಹೇಳಿಕೊಟ್ಟ ರೀತಿ ನನ್ನ ಕರವಸ್ತ್ರ ತೆಗೆದು ಮುಖ ಒರೆಸಿಕೊಂಡು ಸನ್ನೆ ನೀಡಿದೆ . ಆ ಸಮಯಕ್ಕೆ ಆರೋಪಿ ತನ್ನ ಬೈಕ್ ನಲ್ಲಿ ಕುಳಿತು ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟು ಹೋದ . ಆ ವೇಳೆಗೆ ಆರಕ್ಷಕ ಉಪಾಧೀಕ್ಷಕರು ಅಲ್ಲಿಗೆ ಬಂದರು . ನಂತರ ಆರಕ್ಷಕ ಉಪಾಧೀಕ್ಷಕರು ನನಗೆ ಬೈದರು ಹಾಗೂ ನಾವೆಲ್ಲಾ ಆರೋಪಿಯನ್ನು ಹಿಂಬಾಲಿಸಿಕೊಂಡು ಹೋದೆವು . ಆರಕ್ಷಕ ಉಪಾಧೀಕ್ಷಕರು ಮತ್ತು ಕೆಲವು ಸಿಬ್ಬಂದಿ ಅವರ ಜೀಪಿನಲ್ಲಿ ಹಿಂಬಾಲಿಸಿಕೊಂಡು ಹೋದರು . ನಾನು ಹಾಗೂ ನನ್ನ ಜೊತೆ ಇದ್ದ ಇನ್ನಿಬ್ಬರು ಆರಕ್ಷಕ ಉಪನಿರೀಕ್ಷಕರು ನನ್ನ ಎಲ್ ಎಂ ಎಲ್ ಫ್ರಿಡಮ್ ಬೈಕ್ ನಲ್ಲಿ ಹಿಂಬಾಲಿಸಿಕೊಂಡು ಬಂದರು . ನಾನು ಕಾರವಾರದ ಲೋಕಾಯುಕ್ತ ಕಚೇರಿಗೆ ಬರುವುದಕ್ಕೆ ಮೊದಲೇ ನನ್ನ ಎಲ್ ಎಂ ಎಲ್ ಫ್ರಿಡಮ್ ಬೈಕನ್ನು ಆರೋಪಿಯ ಕಚೇರಿಯ ಆವರಣದಲ್ಲಿ ನಿಲ್ಲಿಸಿ ಬಂದಿದ್ದೆ . ನಂತರ ಆರೋಪಿಯನ್ನು ಹಿಂಬಾಲಿಸಿಕೊಂಡು ಹೋದಾಗ ಕುಮಟಾದ ಶಾಂತಿಕಾಂಬಾ ದೇವಸ್ಥಾನ ಇರಬಹುದು ಹೆರವಟ್ಟಾದಲ್ಲಿ ಆ ದೇವಸ್ಥಾನದ ಪ್ರವೇಶ ದ್ವಾರದ ಬಳಿ ಆರೋಪಿ ಸಿಕ್ಕಿದ . ಅಲ್ಲಿ ಆರೋಪಿಯ ಕಿಸೆಯಲ್ಲಿ ಹಣವನ್ನು ನೋಡಿದರು . ಆರೋಪಿ ಕಿಸೆಯಲ್ಲಿ ಹಣ ಇರಲಿಲ್ಲ. ಆಗ ಉಪಾಧೀಕ್ಷಕರು ನನಗೆ ಹಣವನ್ನು ನಾನೇ ಇಟ್ಟುಕೊಂಡಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳಿದರು . ನನ್ನ ಕಿಸೆಯಲ್ಲಿ ಕೈ ಹಾಕಿದರು . ನನ್ನ ಕಿಸೆಯಲ್ಲಿ ಹಣ ಇರಲಿಲ್ಲ. ಆ ವೇಳೆಗೆ ಸ್ವಲ್ಪ ಕತ್ತಲೆಯಾಗುತ್ತಿತ್ತು . ಆರೋಪಿ ನನ್ನಿಂದ ಪಡೆದಿದ್ದ ಹಣವನ್ನು ರಸ್ತೆ ಪಕ್ಕದಲ್ಲಿ ಕಂಪೌಂಡ್ ಪಕ್ಕದಲ್ಲಿ ಬೀಸಾಡಿದ್ದ . ಅದನ್ನು ಆರಕ್ಷಕ ಉಪ ನಿರೀಕ್ಷಕರು ನೋಡಿದರು . ತಕ್ಷಣ ಆ ಹಣವನ್ನು ಮುಟ್ಟಲು ಹೋಗಲಿಲ್ಲ. ಛಾಯಾಗ್ರಾಹಕನನ್ನು ಕರೆಸಿದರು . ಅವರಿಂದ ಹಣ ಬೀಸಾಡಿದ್ದ ಜಾಗದಲ್ಲಿ ಹಣದ ಛಾಯಾಚಿತ್ರ ತೆಗೆಸಿದರು . ಆಗ ನನ್ನನ್ನು ಕುಳಿಸಿಕೊಂಡು

ಆರೋಪಿಯನ್ನು ಕರೆದುಕೊಂಡು ಕುಮಟಾದ ಪ್ರವಾಸಿ ಮಂದಿರಕ್ಕೆ ಲೋಕಾಯುಕ್ತ ಪೊಲೀಸ್ ನವರು ಬಂದರು . ಪ್ರವಾಸಿ ಮಂದಿರದಲ್ಲಿ ಆರೋಪಿಯ ಕೈಗಳನ್ನು ಭಟ್ಟಿ ಇಳಿಸಿದ ನೀರಿನಲ್ಲಿ ಏನನ್ನೋ ಹಾಕಿದ್ದರು ಅದು ಬಣ್ಣ ರಹಿತವಾಗಿತ್ತು , ಅದರಲ್ಲಿ ಅದ್ದಿಸಿ ತೊಳೆಸಿದರು , ಆಗ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ಆ ದ್ರಾವಣವನ್ನು ಬಾಟಲಿಯಲ್ಲಿ ಹಾಕಿ ಜಪ್ತು ಮಾಡಿದರು. ಆರೋಪಿಯ ತಮ್ಮನನ್ನು ಕರೆಯಿಸಿ ಆರೋಪಿಗೆ ಬೇರೆ ಬಟ್ಟೆ ತರಿಸಿದರು . ಆರೋಪಿ ಧರಿಸಿದ್ದ ಪ್ಯಾಂಟನ್ನು ತೆಗೆಸಿ ಜಪ್ತು ಮಾಡಿದರು . ಆ ಪ್ಯಾಂಟನ್ನು ದ್ರಾವಣದಲ್ಲಿ ತೊಳೆದರು . ಆಗ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು . ಆ ದ್ರಾವಣವನ್ನು ಜಪ್ತು ಮಾಡಿದರು . ಅದನ್ನು ಬಾಟಲಿಯಲ್ಲಿ ತೆಗೆದುಕೊಂಡರು . ಅದನ್ನು ಜಪ್ತು ಮಾಡಿದರು . ಆ ಬಾಟಲಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅವುಗಳಿಗೆ ಆರ್ಟಿಕಲ್ ಸಂಖ್ಯೆ ಕೊಟ್ಟರು . ಈಗ ತೋರಿಸಿದ ಮೂರು ಬಾಟಲಿಯಲ್ಲಿ ಆಗ ಆ ದ್ರಾವಣವನ್ನು ಜಪ್ತು ಮಾಡಿದ್ದಾರೆ . ಅವುಗಳನ್ನು ಈಗಾಗಲೇ ಮು.ಮಾ. 7, 8 ಮತ್ತು 10 ಎಂದು ಗುರುತಿಸಲಾಗಿದೆ . ಆ ದಿನ ಆರೋಪಿ ಧರಿಸಿದ್ದ ಮತ್ತು ಪೊಲೀಸ್ ನವರು ಜಪ್ತು ಮಾಡಿದ ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ನೋಡಿದ ಪ್ಯಾಂಟ್ ಅದೇ ಇರುತ್ತದೆ . ಅದನ್ನು ಮು.ಮಾ. 9 ಎಂದು ಗುರುತಿಸಲಾಗಿದೆ . ಆ ಸಮಯದಲ್ಲಿ ಛಾಯಾಚಿತ್ರ ತೆಗೆದಿರುತ್ತಾರೆ. ಅವುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈಗ ನೋಡಿದ ಛಾಯಾಚಿತ್ರವನ್ನು ನೋಟು ಎಸೆದಿದ್ದ ಸ್ಥಳದಲ್ಲಿ ತೆಗೆಯಲಾಗಿದೆ . ಅವುಗಳನ್ನು ನಿ.ಪಿ. 19 ರಿಂದ 22 ಎಂದು ಈಗಾಗಲೇ ಗುರುತಿಸಲಾಗಿದೆ . ಈಗ ನೋಡಿದ ಛಾಯಾಚಿತ್ರಗಳನ್ನು ಪ್ರವಾಸಿ ಮಂದಿರದಲ್ಲಿ ತೆಗೆದಿರಬೇಕು . ಅವುಗಳನ್ನು ಈಗಾಗಲೇ ನಿ.ಪಿ. 23 ರಿಂದ 36 ಎಂದು ಗುರುತಿಸಲಾಗಿದೆ . ಈಗ ತೋರಿಸಿದ ಮತ್ತೊಂದು ಛಾಯಾಚಿತ್ರವನ್ನು ಹಣ ಬೀಸಾಡಿದ ಸ್ಥಳದಲ್ಲಿ ಹಣವನ್ನು ಹುಡುಕುವಾಗ ತೆಗೆಯಲಾಗಿದೆ . ಆ ಛಾಯಾಚಿತ್ರವನ್ನು ನಿ.ಪಿ. 37 ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ನನ್ನ ಕೆಲಸಕ್ಕೆ ಸಂಬಂಧಪಟ್ಟ ಅಂದರೆ ಕೆಎಂಎಫ್ ಗೆ ಸಂಬಂಧಪಟ್ಟ ಕಡತವನ್ನು ಕೇಳಿದರು .

(ಈ ಹಂತದಲ್ಲಿ 2.00 ಗಂಟೆಯಾಗಿದ್ದರಿಂದ 2.45 ಗಂಟೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

3. ಈಗ ನಾನು ಕುಮಟಾದ ಪ್ರವಾಸಿ ಮಂದಿರದಲ್ಲಿ ಬರೆದ ಪಂಚನಾಮೆಯನ್ನು ನೋಡಿರುತ್ತೇನೆ . ಅದರಲ್ಲಿ ನನ್ನ ರುಜು ಇದೆ . ಆ ಪಂಚನಾಮೆಯನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದೆ . ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 2(ಸಿ) ಎಂದು ಗುರುತಿಸಲಾಯಿತು. ಅಲ್ಲಿ ನಕ್ಷೆ ತಯಾರಿಸಿದರು . ಅದಕ್ಕೆ ನಾನು ರುಜು ಮಾಡಿದ್ದೇನೆ . ಈಗ ನಾನು ಆ ನಕ್ಷೆಯನ್ನು ನೋಡಿರುತ್ತೇನೆ . ಅದರಲ್ಲಿ ನನ್ನ ರುಜು ಇದೆ . ಆ ನಕ್ಷೆಯನ್ನು ನಿ.ಪಿ. 38 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 38(ಎ) ಎಂದು ಗುರುತಿಸಲಾಯಿತು. ಆ ದಿನ ನಾನು ಹಾಜರುಪಡಿಸಿದ ಮತ್ತು ಆರೋಪಿಯಿಂದ ಜಪ್ತು ಮಾಡಿದ ರೂ. 3000/- ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡಿದ ಹಣ ಅದೇ ಇರುತ್ತದೆ . ಈಗಾಗಲೇ ಅದನ್ನು ಮು.ಮಾ. 1 ಎಂದು ಗುರುತಿಸಲಾಗಿದೆ . ಅದರಲ್ಲಿ ರೂ. 500/- ರ ಎರಡು ನೋಟು ಮತ್ತು ರೂ. 1000/- ದ ಎರಡು ನೋಟು ಇದೆ . ನಾನು ಹಿಂದೆ ರೂ. 2000/- ಒಂದು ನೋಟು ಎಂದು ಹೇಳಿದ್ದು ಅದು ರೂ. 1000/- ದ ಎರಡು ನೋಟು ಆಗಿರುತ್ತದೆ ಹಾಗೂ ರೂ. 500/- ರ ಎರಡು ನೋಟು ಆಗಿರುತ್ತದೆ . ರೂ.2000/- ನೋಟನ್ನು ನಾನು ಕೊಟ್ಟಿಲ್ಲ. ಆ ಸಮಯದಲ್ಲಿ ರೂ. 2000/- ದ ನೋಟು ಜಾರಿಯಲ್ಲಿ ಇರಲಿಲ್ಲ. ಆರೋಪಿಯನ್ನು ಕಡತ ಕೇಳಿದಾಗ ಅದು ತಾಲೂಕು ಪಂಚಾಯತಿ ಕಚೇರಿಯಲ್ಲಿ ಇರುವುದಾಗಿ ಪಂಚನಾಮೆ ಸಮಯದಲ್ಲಿ ಹೇಳಿದ . ಆ ವೇಳೆಗೆ ತಾಲೂಕು ಪಂಚಾಯತಿ ಕಚೇರಿ ಬಂದಾಗಿತ್ತು . ಲೋಕಾಯುಕ್ತ ಅಧಿಕಾರಿ ತಾಲೂಕು ಪಂಚಾಯತಿ

ಕಚೇರಿಯ ಅಧಿಕಾರಿಗಳು ಸಿಬ್ಬಂದಿಗಳನ್ನೆಲ್ಲಾ ಕರೆಸಿದರು ಮತ್ತು ಚಾವಿ ತರಿಸಿ ತಾಲೂಕು ಪಂಚಾಯತಿ ಕಚೇರಿ ಬಾಗಿಲು ತೆರೆಸಿದರು . ಆಗ ಅಲ್ಲಿ ನನಗೆ ಸಂಬಂಧಪಟ್ಟ ಕಡತ ಇರಲಿಲ್ಲ. ನಂತರ ಆರೋಪಿ ಆ ಕಡತ ಅವನ ಬೈಕ್ ನಲ್ಲಿ ಇದೆ ಎಂದು ಹೇಳಿದ . ಆ ವೇಳೆಗೆ ಆರೋಪಿಯ ಬೈಕನ್ನು ಪ್ರವಾಸಿ ಮಂದಿರದ ಬಳಿ ತಂದಿದ್ದರು . ಆರೋಪಿಯ ಬೈಕ್ ನಲ್ಲಿ ಹಿಂಬದಿ ಬಾಕ್ಸ್ ನಲ್ಲಿ ಕಡತ ಇಟ್ಟಿದ್ದ ಅದನ್ನು ತೆಗೆದು ಹಾಜರುಪಡಿಸಿದ . ಆ ಕಡತದ ಮೂಲ ದಾಖಲಾತಿಯನ್ನು ತಾಲೂಕು ಪಂಚಾಯತಿ ಅಧಿಕಾರಿಗೆ ವಾಪಸ್ಸು ಮಾಡಿದರು . ಅದರ ನೆರಳಚ್ಚು ಪ್ರತಿಗಳನ್ನು ಆಗ ಲೋಕಾಯುಕ್ತ ಪೊಲೀಸ್ ನವರು ಪಡೆದಿರಬಹುದು . ಈಗ ಆ ಕಡತದ ನಕಲನ್ನು ನಾನು ನೋಡಿರುತ್ತೇನೆ . ಅದರ ಕವಚ ಪತ್ರ ಸೇರಿ ಅದು 40 ಹಾಳೆ ಇದೆ . ಅದರಲ್ಲಿ ನನ್ನ ರುಜು ಇದೆ . ಅವುಗಳು ದೃಢೀಕರಿಸಿದ ನೆರಳಚ್ಚು ಪ್ರತಿಗಳು ಆಗಿವೆ . ಆದರೆ ದೃಢೀಕರಿಸಿದ ಬಗ್ಗೆ ಸಹಿ ಇದೆ ಮೊಹರು ಇರುವುದಿಲ್ಲ. ಅವುಗಳನ್ನು ಒಟ್ಟಾರೆಯಾಗಿ ನಿ.ಪಿ. 39 ಎಂದು ಗುರುತಿಸಲಾಯಿತು. ಅದರಲ್ಲಿ 1 ರಿಂದ 40 ಹಾಳೆಗಳನ್ನು ಪ್ರತ್ಯೇಕವಾಗಿ ಅದನ್ನು ನಿ.ಪಿ. 39/1 ರಿಂದ 40 ಎಂದು ಗುರುತಿಸಲಾಯಿತು. ನಾನು ನನಗೆ ಕೊಟ್ಟಿದ್ದ ವಾಯ್ಸು ರೆಕಾರ್ಡರ್ ನ್ನು ವಾಪಸ್ಸು ಲೋಕಾಯುಕ್ತ ಅಧಿಕಾರಿಗೆ ಕೊಟ್ಟೆ. ಅದರಲ್ಲಿ ಏನು ಧ್ವನಿ ಮುದ್ರಣ ಆಗಿಲ್ಲ ಕಾರಣ ಆರೋಪಿ ನಾನು ಅವನನ್ನು ಅವನ ಕಚೇರಿಯಲ್ಲಿ ಭೇಟಿ ಮಾಡಿದಾಗ ಹೊರಗೆ ಹೋಗಿ ಎಂದು ಬಾಯಿ ಮಾತಿನಲ್ಲಿ ಹೇಳಲಿಲ್ಲ ಕೈ ಸನ್ನೆಯಿಂದ ಹೇಳಿದ ಹಾಗೂ ಕೈ ಸನ್ನೆಯಿಂದ ಅವನ ಕಚೇರಿಯ ಆವರಣದಲ್ಲಿರುವ ಬೈಕ್ ನಿಲ್ದಾಣದ ಬಳಿ ಬರುವಂತೆ ನನಗೆ ಹೇಳಿದ . ಅಲ್ಲಿ ಹೋದಾಗ ಹಣ ತೆಗೆದುಕೊಂಡ . ಆದ್ದರಿಂದ ವಾಯ್ಸು ರೆಕಾರ್ಡರ್ ನಲ್ಲಿ ಯಾವುದೇ ಸ್ಪಷ್ಟವಾದ ಧ್ವನಿ ಮುದ್ರಣ ಆಗಿಲ್ಲ. ನಾನು ದೂರನ್ನು ಕೊಡುವಾಗ ಪೋನ್ ನಲ್ಲಿ ಆರೋಪಿ ಜೊತೆ ಆಗಿದ್ದ ಸಂಭಾಷಣೆಯ ಧ್ವನಿ ಮುದ್ರಣವನ್ನು ಸಿ.ಡಿ. ಮಾಡಿ ಲೋಕಾಯುಕ್ತ ಕಚೇರಿಯಲ್ಲಿ ಕೇಳಿಸಿರುತ್ತಾರೆ . ಅದೇ ದಿನ ಅದನ್ನು ಕೇಳಿಸಿದರು . ಅದನ್ನು ಕೇಳಿ ಖಚಿತಪಡಿಸಿಕೊಂಡರು . ನಂತರ ಅದರ ಸಿ.ಡಿ. ಮಾಡಿಸಿಕೊಂಡರು ಆದರೆ ಯಾವಾಗ ಸಿ.ಡಿ. ಮಾಡಿಸಿಕೊಂಡರು ಎಂದು ನೆನಪಿಲ್ಲ. ಈಗ ತೋರಿಸಿದ ಪಂಚನಾಮೆ ಸಿ.ಡಿ. ಪಂಚನಾಮೆಯಾಗಿದೆ . ಅದರಲ್ಲಿ ನನ್ನ ರುಜು ಇದೆ . ಆ ಪಂಚನಾಮೆಯನ್ನು ನಿ.ಪಿ. 4 ಎಂದು ಗುರುತಿಸಲಾಗಿದೆ . ಸಾಕ್ಷಿಯ ರುಜುವನ್ನು ಕೊನೆಯ ಪುಟದಲ್ಲಿ ನಿ.ಪಿ. 4(ಸಿ) ಎಂದು ಗುರುತಿಸಲಾಯಿತು. ಅದು 11 ಹಾಳೆ ಇವೆ . ಪ್ರತಿ ಹಾಳೆಯಲ್ಲಿ ನನ್ನ ರುಜು ಇದೆ . ಆ ಸಿ.ಡಿ. ಯಲ್ಲಿ ಇದ್ದ ಸಂಭಾಷಣೆಯನ್ನು ನಿ.ಪಿ. 4 ಪಂಚನಾಮೆಯಲ್ಲಿ

ಬೆರಳಚ್ಚು ಮಾಡಿದ್ದಾರೆ . ಆ ಪಂಚನಾಮೆಯಲ್ಲಿ ಇರುವ ವಿಚಾರ ಸರಿ ಇದೆ ಎಂದು ತಿಳಿದುಕೊಂಡು ನಾನು ಅದಕ್ಕೆ ರುಜು ಮಾಡಿದ್ದೇನೆ . ಈಗ ನೋಡಿದ ಮೊಹರಾದ ಲಕೋಟೆಯಲ್ಲಿ ಆಗ ಸಿ.ಡಿ. ಜಪ್ತು ಮಾಡಿದ್ದಾರೆ . ಅದನ್ನು ಈಗಾಗಲೇ ಮು.ಮಾ. 11 ಎಂದು ಗುರುತಿಸಲಾಗಿದೆ . ಆ ಲಕೋಟೆ ಮೇಲೆ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ಮು.ಮಾ. 11(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ ಸಿ ಕೆ ರವರಿಂದ ಎನ್ ವಿ ಎನ್ ರವರ ಪರವಾಗಿಃ**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟೀ ಸವಾಲನ್ನು ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ